ಧರ್ಮವಾಗಿದೆ. ಇದರ ಹೆಸರಲ್ಲೇ ಐಕ್ಯತೆಯನ್ನು ಸಾರಬಹುದಾದಷ್ಟು ಉತ್ಕಟವಾದ ಪ್ರೀತಿ. ಇದರಲ್ಲಿ ಮೀಸಲಾತಿಗಳಿವೆ. ವರ್ಡ್ ಕಪ್, ಐಪಿಎಲ್ ಮುಂತಾದ ತಮಗೆ ಬೇಕಾದ ಮ್ಯಾಚ್‌ಗಳು ಬಂದಾಗ ಮಾತ್ರ ನೋಡುವವರಿದ್ದಾರೆ. ತಮಗೆ ಬೇಕಾದ ಆಟಗಾರರು ಬ್ಯಾಟಿಂಗ್ ಮಾಡುವಾಗ, ಬೌಲಿಂಗ್ ಮಾಡುವಾಗ ಮಾತ್ರ ನೋಡಿ ತೃಪ್ತರಾಗುವವರ ಕೆಟಗರಿ ಬೇರೆ. ಗೆಲ್ಲುವ ಭರವಸೆ ಇದ್ದಾಗ ಮಾತ್ರ ನೋಡುವವರದ್ದು ಬೇರೆ ಕೆಟಗರಿಯೇ.

ಮ್ಯಾಚ್ ನಡೆದಾಗ ನೀವು ಅಕಸ್ಮಾತ್ ಕ್ರಿಕೆಟ್ ಪ್ರಿಯರ ಮನೆಗೆ ಹೋದಿರೋ... 'ಬನ್ನಿ' ಎನ್ನುವ ದೇಶಾವರಿ ನಗೆ ನೀವು ಬೇಡವಾಗಿ ಬಂದುದನ್ನು ಸಾರುತ್ತದೆ. ಆಗ ಅವರಿಷ್ಟದ ತಂಡ ಗೆಲ್ಲುತ್ತಿದ್ದರೆ ಒಂದೆರೆಡು ಒಳ್ಳೆಯ ಮಾತುಗಳು ಬರುತ್ತವೆ. ಸೋಲುವ ಸ್ಥಿತಿಯಲ್ಲಿದ್ದರೆ ನಿಮಗೆ ಕೆಂಗಣ್ಣಿನ ನೋಟವೇ ಗತಿ. ಅವರ ಶ್ರೀಮತಿಯೂ ಕ್ರಿಕೆಟ್ ಪ್ರಿಯಳಾಗಿದ್ದಲ್ಲಿ ನಿಮಗೆ ಕಾಫಿ, ತಿಂಡಿ ಸೊನ್ನೆಯೇ. ಥರ್ಡ್ ಅಂಪೈರ್‌ಗಿಂತ ಹೆಚ್ಚಾಗಿ ಈ ಫೋರ್ಥ್ ಅಂಪೈರ್‌ಗಳು ವಿಶ್ಲೇಷಿಸಿ ತೀರ್ಪು ಕೊಡುತ್ತಾರೆ. ಗೆದ್ದರೆ ಸರಿ. ಸೋತರೆ ಅನಂತರ ಫೋನಿನಲ್ಲೂ ತಮಗೆ ಬೇಕಾದವರೊಂದಿಗೆ ವಿಶ್ಲೇಷಣಾ ವರದಿಗಳು... ಈ ಬೌಲರ್‌ಗೆ ಕೊನೆಯ ಓವರ್ ಕೊಡಬಾರದಿತ್ತು, ಇವನು ಕ್ಯಾಚ್ ಬಿಡಬಾರದಿತ್ತು... ಇತ್ಯಾದಿ ಇತ್ಯಾದಿ. ಭಾರತ, ಪಾಕಿಸ್ತಾನದ ಮ್ಯಾಚ್ ಇದ್ದಾಗಲಂತೂ ಬೀದಿಗಳು, ಮಾಲ್‌ಗಳು, ಹೋಟೆಲ್‌ಗಳು ಬಿಕೊ ಎನ್ನುತ್ತವೆ. ಟ್ರಾಫಿಕ್ ಕಡಿಮೆಯಾಗಿ ಆಟದ ತೀವ್ರತೆಯನ್ನು ಸಾರುತ್ತವೆ. ಭಾರತ 83ರ ವರ್ಡ್‌ಕಪ್ ಗೆದ್ದಾಗಿನ ಸಂದರ್ಭ ಇನ್ನೂ ಅಚ್ಚಳಿಯದೇ ನೆನಪಿದೆ. ಆಗ ಎಲ್ಲರ ಮನೆಯಲ್ಲೂ ಟೀವಿಗಳಿರಲಿಲ್ಲ. ನಮ್ಮ ಮನೆಯಲ್ಲಂತೂ ಇರಲಿಲ್ಲ ಬಿಡಿ. ಮೇಲ್ಗಡೆ ಮನೆಯವರ 10x10 ಕೋಣೆಯಲ್ಲಿ ಕೂತು, ಒಂಟಿಕಾಲಲ್ಲಿ ನಿಂತು, ಬಗ್ಗಿ ಒಂಟಿಕಣ್ಣಲ್ಲಿ ನೋಡಿದ ನೆನಪು. ಇಡೀ ದಿನ ಆ ಮನೆಯವರಿಗೆ ಸ್ಟೇಡಿಯಂನಲ್ಲೇ ಕುಳಿತಂಥ ಅನುಭವ. ಕೊನೆಗೆ ಭಾರತ ಗೆದ್ದು ಕಪಿಲ್‌ದೇವ್ ಕಪ್ ಎತ್ತಿ ಹಿಡಿದಾಗ ಪಟಾಕಿಗಳು ಸದ್ದು ಮಾಡಿದ್ದವು. ಅಪ್ಪನಿಗೆ ಟೀವಿ ತೆಗೆದುಕೊಳ್ಳಲು ಇಷ್ಟವಿರಲಿಲ್ಲ. ಆದರೆ, ಬೇರೆಯವರ ಮನೆಗೆ ಹೋಗಿ ಕ್ರಿಕೆಟ್ ನೋಡಲು ಸ್ವಾಭಿಮಾನ ಅಡ್ಡ ಬರುತ್ತಿತ್ತು. ಅದಕ್ಕಾಗೇ ಟೀವಿ ಮನೆಗೆ ಬಂತು. ಒಮ್ಮೆ ಹೀಗೇ ಮಗ್ನರಾಗಿ ಮ್ಯಾಚ್ ನೋಡುವಾಗ ಶಾಲಾ ಸಹಪಾಠಿಯೊಬ್ಬರು ಗೃಹಪ್ರವೇಶಕ್ಕೆ ಆಮಂತ್ರಿಸಲು ಬಂದಿದ್ದಾರೆ. ಅಪ್ಪನ ಅರ್ಧ ಕಣ್ಣು, ತಲೆ ಮ್ಯಾಚಲ್ಲಿ. "ಇನ್ವಿಟೇಷನ್ ಕಾರ್ಡ್ ಮಾಡಿಸಿಲ್ಲಪಾ. ಮಾಳಮಾರುತಿವಳಗ ಹಾಲಿನ ಡೇರಿ ಕಡೇನ ಹೊಸಾ ಮನಿ... ಎಲ್ಲಾರೂ ಅವಶ್ಯ ಬರ್ರಿ" ಎಂದು ಹೇಳುತ್ತ ವಿಳಾಸವಿರುವ ಕಾಗದವನ್ನು ಕೊಟ್ಟಿದ್ದರು. "ತಪ್ಪದ ಬರ್ತೇವಿ" ಎಂದು ಅವರನ್ನು ಸಾಗ ಹಾಕಿದ ಅಪ್ಪ ಕ್ರಿಕೆಟ್ಟಿನಲ್ಲಿ ಕಳೆದುಹೋದರು. ಆ ಕಾಗದವೂ ಸ್ಥಾನಪಲ್ಲಟವಾಗಿ ನಾಪತ್ತೆಯಾಯಿತು. ಅಂದು ಹೊರಟಾಗ ಅವರಿಗೆ ನೆನಪಿದ್ದದ್ದು ದಿನಾಂಕ... ಮಾಳಮಾರುತಿ... ಹಾಲಿನ ಡೇರಿ. ಗಂಟೆಗಟ್ಟಲೇ ಉರಿಬಿಸಿಲಲ್ಲಿ ಹುಡುಕಿದರೂ ಮನೆ ಸಿಗುತ್ತಿಲ್ಲ. "ಹಾಳು ಕ್ರಿಕೆಟ್ಟಿನ ಹುಚ್ಚು, ಅಡ್ರೆಸ್ ಸಮಾ ಇಟಗೊಳ್ಳಿಲ್ಲಾ" ಎಂದು ಅಮ್ಮನ ಗೊಣಗಾಟ. "ಗೋಪಾಲನ ಮನಿ..." ಎನ್ನುತ್ತ ಎಮ್ಮೆಯಂತೆಯೇ ಡೇರಿಯ ಸುತ್ತ ಸುತ್ತಿದಾಯಿತು. ಇನ್ನೆರೆಡು ಹೊಸ ಮನೆಗಳಲ್ಲಿ ಇಣುಕಿ ಗೋಪಾಲನನ್ನು ಹುಡುಕುತ್ತ ಬಸವಳಿದಾಗ ದೂರದಲ್ಲಿ ಹಸುವಿಗೆ ಅಕ್ಕಿಬೆಲ್ಲ ತಿನ್ನಿಸುತ್ತಿದ್ದ ಗೋಪಾಲ ಕಾಣಿಸಿದ. ಗೋಕುಲದ ಸಾಕ್ಷಾತ್ ಶ್ರೀಕೃಷ್ಣನ ದರ್ಶನವಾದಂತಾದದ್ದು ನಿಜ.

ಈಗ ಐ.ಪಿ.ಎಲ್. ಬಂದ ಮೇಲಂತೂ ಕೇಳುವುದೇ ಬೇಡ. ಮನೆಯಲ್ಲಿ ಇರುವ ಮೂರು ಜನರಲ್ಲೇ ಪಾರ್ಟಿ ಚೇಂಜ್. ಒಬ್ಬೊಬ್ಬರ ಬೆಂಬಲ ಒಂದೊಂದು ತಂಡಕ್ಕೆ. ಟೀವಿ ಇಲ್ಲದ, ಕ್ರಿಕೆಟ್ ಇಲ್ಲದ ಮನೆ ವಿರಳ ಎಂದರೂ ಪರವಾಗಿಲ್ಲ. ವರ್ಷದ ಮಗುವೂ ಕೈಯಲ್ಲಿ ಬ್ಯಾಟ್ ಹಿಡಿದು ಬೀಸುತ್ತದೆ. ಮಕ್ಕಳು ಮೊದಲು ಬಿದ್ದು ಅನಂತರ ಚೆಂಡನ್ನು ಕ್ಯಾಚ್ ಹಿಡಿಯುವ ಅನುಕರಣೆ ನೋಡಲು ಚಂದ. ಭಾರತದಲ್ಲಿ